## ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

## ಸಿ.ಸಿ. 4741/2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕ:** 04.08.2026 **ಸಿಡಬ್ಲ್ಯೂ 5**

| | |
|---|---|
| ಹೆಸರು | ಶ್ರೀಮತಿ ಸಮೀನಾ |
| ಗಂಡನ ಹೆಸರು | ಆರೀಫ್ |
| ವಯಸ್ಸು | 42 ವರ್ಷ |
| ಉದ್ಯೋಗ | ಟೈಲರಿಂಗ್ ಕೆಲಸ |
| ವಾಸ ಸ್ಥಳ | ತುಮಕೂರು |

**ಮುಖ್ಯ ವಿಚಾರಣೆ:** ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ.1 ನನ್ನ ಗಂಡ. ದಿ:24.05.2025 ರಂದು ನನ್ನ ಗಂಡ ಮತ್ತು ನನ್ನ ಮಗ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿರುವಾಗ ಒಂದು ಫೋನ್ ಕರೆ ಬಂದಿದ್ದು, ನಾನು ಆಕಾಶ ಮಾತನಾಡುತ್ತಿದ್ದೇನೆ, ಯಾರು ಎಂದು ಕೇಳಿದ್ದಕ್ಕೆ ನಾವು ನಿಮ್ಮ ಹತ್ತಿರ ಕಾರು ರಿಪೇರಿ ಮಾಡಿಸಿಕೊಂಡಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ನನ್ನ ಗಂಡ ನನಗೆ ಸರಿಗೆ ಕೇಳಿಸುತ್ತಿಲ್ಲ ನಾನು ಮನೆಗೆ ಹೋಗಿ ಫೋನ್ ಮಾಡುತ್ತೇನೆ ಎಂದು ಹೇಳಿರುತ್ತಾರೆ. ನಂತರ ನನ್ನ ಗಂಡ ಮನೆಗೆ ಬಂದು ಫೋನ್ ಮಾಡಿದಾಗ ನಮ್ಮ ಮನೆಯ ಪಕ್ಕದಲ್ಲಿ ಒಬ್ಬ ಅಜ್ಜ ಇದ್ದಾನೆ ಅವರಿಗೆ 3 ಜನ ಹೆಣ್ಣುಮಕ್ಕಳು ಅವನ ಹತ್ತಿರ ಚಿನ್ನ ಇದೆ ಯಾರಿಗೂ ಹೇಳಬೇಡಿ ಎಂದು ಹೇಳಿರುತ್ತಾರೆ. ನಂತರ ನನ್ನ ಗಂಡ ನನ್ನ ಮಗನ ಮತ್ತು ನನ್ನ ಸಮಕ್ಷಮ ಸದರಿ ವಿಷಯವನ್ನು ತಿಳಿಸಿರುತ್ತಾರೆ ಆಗ ನಾವು ಆ ರೀತಿ ಇರುವುದಿಲ್ಲ ಅವರು ಸುಳ್ಳು ಹೇಳುತ್ತಾರೆ ಎಂದು ತಿಳಿಸಿರುತ್ತೇವೆ. ನಂತರ ಮರುದಿನ ನನ್ನ ಗಂಡನಿಗೆ ಅವರು ಫೋನ್ ಮಾಡಿದ್ದು ಅದೇ ವಿಷಯವನ್ನು ಹೇಳಿರುತ್ತಾರೆ. ನಂತರ ಅಕ್ಕನಿಗೆ ಫೋನ್ ಕೊಡಿ ನಾವು ಮಾತನಾಡುತ್ತೇವೆ ಎಂದು ಹೇಳಿರುತ್ತಾರೆ. ನಂತರ ನಾನು ಮಾರನೇ ದಿವಸ ಫೋನ್ ನಲ್ಲಿ ಮಾತನಾಡಿದಾಗ ನಾನು ನಿಮ್ಮ ಊರಲ್ಲೇ ಯಾರಾದರೂ ಇರುತ್ತಾರೆ ಅವರಿಗೆ ಕೊಡಿ ನಿಮ್ಮ ಊರು ಯಾವುದು ಎಂದು ಕೇಳಿದಾಗ ಬಾಗಲಕೋಟೆಯ ಹತ್ತಿರ ಯಾವುದೋ ಒಂದು ಊರಿನ ಹೆಸರು ಹೇಳಿರುತ್ತಾರೆ. ನಂತರ ನಾನು ಅಲ್ಲೇ ನಿಮ್ಮ ಊರಲ್ಲಿ ಸಾಕಷ್ಟು ಜನರು ಇರುತ್ತಾರೆ ನಮಗೆ ಏಕೆ ಬಂಗಾರ ಕೊಡುತ್ತೀರಾ ಎಂದು ಹೇಳಿದ್ದಕ್ಕೆ ನೀವು ತುಂಬ ಒಳ್ಳೆಯವರು ಹಾಗಾಗಿ ನಿಮಗೆ ಬಂಗಾರ ಕೊಡುತ್ತೇವೆ ಎಂದು ಹೇಳಿರುತ್ತಾರೆ. ನಂತರ ಅವರು ನಾವು ನಮ್ಮ ಏರಿಯಾದಿಂದ ಬರಲು ನಿಮಗೆ ದೂರ ಆಗುತ್ತದೆ ನೀವು ಹರಿಹರಕ್ಕೆ ಬನ್ನಿ ನಾವು ಅಲ್ಲೇ ಬರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ನಾನು ಮತ್ತು ನನ್ನ ಗಂಡ ನನ್ನ ಮಗ ಒಂದು ಸಾರಿ ನೋಡಿ ಬರೋಣ ಏನಾಗುತ್ತದೆ ಎಂದು ನಿರ್ಧಾರ ಮಾಡಿ ದಿ:27.05.2025 ರಂದು ರಾತ್ರಿ ನಾವು ಮನೆಯಿಂದ 11.30 ಗಂಟೆಗೆ ಹೊರಟು ದಾವಣಗೆರೆಗೆ ಬಂದಿರುತ್ತೇವೆ. ನಂತರ ನಾವು ಅಲ್ಲಿಂದ ಹರಿಹರಕ್ಕೆ ಬಂದಿರುತ್ತೇವೆ. ನಂತರ ನಮ್ಮನ್ನು

ನೀಲಗುಂದ ಕ್ರಾಸ್ ಹತ್ತಿರ ಬರಲು ತಿಳಿಸಿರುತ್ತಾರೆ. ನಂತರ ಅಲ್ಲಿ ಹೋಗಿ ಹೊಲದಲ್ಲಿ ಒಂದು ಬೇವಿನ ಮರವಿದ್ದು ಅಲ್ಲಿ ನಿಂತಿರುತ್ತೇವೆ. ನಂತರ ಚಪ್ಪಲಿ ಬಿಟ್ಟು ನಮಸ್ಕಾರ ಮಾಡಿ ಬನ್ನಿ ಅಂತ ತಿಳಿಸಿರುತ್ತಾನೆ. ಅವನ ಹತ್ತಿರ ಒಂದು ಕವರಲ್ಲಿ ಬಂಗಾರ ಇತ್ತು ಅವುಗಳನ್ನು ನಾನು ಮುಟ್ಟಿ ನೋಡಿದಾಗ 3 ಸಣ್ಣ ಬಂಗಾರದ ಕಾಯಿನ್‌ಗಳು ಇದ್ದವು. ನಾನು ಅದರಲ್ಲಿ ಒಂದು ಬಂಗಾರದ ಕಾಯಿನನ್ನು ತೆಗೆದುಕೊಂಡಿರುತ್ತೇನೆ. ನಾವು ಬಸ್ ನಿಲ್ದಾಣಕ್ಕೆ ಹೋಗಬೇಕು ನಮಗೆ ದುಡ್ಡು ಕೊಡಿ ಅಂತ ಹೇಳಿದ್ದಕ್ಕೆ ನಾನು ರೂ.1000/- ಹಣ ಕೊಟ್ಟಿರುತ್ತೇನೆ. ನಂತರ ಚೆಕ್ ಮಾಡಿಕೊಳ್ಳಿ ನಂತರ ನಮಗೆ ತಿಳಿಸಿ ಅಂತ ಹೇಳಿರುತ್ತಾರೆ. ನಂತರ ನಾವು ಮಲಬಾರ್ ಗೋಲ್ಡ್ , ತುಮಕೂರಿನಲ್ಲಿ ತೋರಿಸಿದಾಗ ಅದು ಶುದ್ಧ ಬಂಗಾರವೆಂದು ಹೇಳಿರುತ್ತಾರೆ. ನಂತರ ಆರೋಪಿತರು ನಮಗೆ ಪೋನ್ ಮಾಡಿ ಬಂಗಾರದ ಬಗ್ಗೆ ವಿಚಾರಿಸಿದ್ದು ಅದು ಶುದ್ಧ ಬಂಗಾರವಿದೆ ಅಂತ ತಿಳಿಸಿರುತ್ತೇವೆ. ಆಗ ಆರೋಪಿತರು 20 ಲಕ್ಷ ಹಣವನ್ನು ತೆಗೆದುಕೊಂಡು ಬನ್ನಿ ನಿಮಗೆ ಬಂಗಾರ ಕೊಡುತ್ತೇವೆ ಅಂತ ತಿಳಿಸಿರುತ್ತಾರೆ. ದಿಃ29.05.2025 ರಂದು ನನ್ನ ಮಗ ನನ್ನ ತಂಗಿ ಹತ್ತಿರ ಇದ್ದ ಒಡವೆಗಳನ್ನು ಕೊಟ್ಟಿರುತ್ತಾಳೆ. ನಂತರ ನನ್ನ ಕಡೆ ಇದ್ದ ಒಡವೆಗಳನ್ನು ನನ್ನ ತಂಗಿಯ ಒಡವೆಗಳನ್ನು ಸೇರಿಸಿ ಮಣಿಪುರಂ ಗೋಲ್ಡ ಫೈನಾನ್ಸನಲ್ಲಿ ಅಡವಿಟ್ಟು ರೂ.12 ಲಕ್ಷ ತೆಗೆದುಕೊಂಡಿರುತ್ತೇವೆ. ನಂತರ ದಿಃ30.05.2025 ರಂದು ನಾನು, ನನ್ನ ಗಂಡ ಮತ್ತು ನನ್ನ ಮಗ ಹರಿಹರದ ಕೆಇಬಿ ಬ್ರಿಡ್ಜ ಹತ್ತಿರ ಇಟ್ಟಿಗೆ ಪ್ಯಾಕ್ಟರಿ ಹತ್ತಿರ ಬಂದಿರುತ್ತೇವೆ. ಅಲ್ಲಿ ಬೇರೆ ಒಬ್ಬ ವ್ಯಕ್ತಿ ಇದ್ದನು. ಅವನ ಕೈಯಲ್ಲಿ ಅರ್ಧ ಕೆಜಿ ಬಂಗಾರ ಇತ್ತು. ಅವರು ಬರುವಾಗ ಸ್ವೀಟನ್ನು ತೆಗೆದುಕೊಂಡು ಬನ್ನಿ ಅಂತ ಹೇಳಿರುತ್ತಾರೆ. ತಾತನಿಗೆ ರೂ.10 ಲಕ್ಷ ನನಗೆ ರೂ.2 ಲಕ್ಷ ಕಮಿಷನ್ ಸೆಪರೇಟಾಗಿ ತನ್ನಿ ಅಂತ ಹೇಳಿರುತ್ತಾರೆ. ನಂತರ ನಾವು ಬಂಗಾರವನ್ನು ತೆಗೆದುಕೊಂಡು ರೂ.12 ಲಕ್ಷ ಹಣ ಕೊಟ್ಟಿರುತ್ತೇವೆ, ಆಗ ಅವರು ಎಲ್ಲೂ ನಿಲ್ಲಬೇಡಿ ನೇರವಾಗಿ ಊರಿಗೆ ಹೋಗಿ ಎಂದು ಹೇಳಿರುತ್ತಾರೆ. ನಂತರ ನಾನು ಯೂಟೂಬನ್ನು ತೆಗೆದು ನೋಡಿದಾಗ ಅದರಲ್ಲಿ ಹರಿಹರ ಮತ್ತು ಹರಪ್ಪನಹಳ್ಳಿ ಯಲ್ಲಿ ಬಂಗಾರ ಕೊಡುವುದಾಗಿ ಮೋಸ ಮಾಡುತ್ತಾರೆಂದು ಬರುತ್ತಿತ್ತು ನಾನು ಗಾಬರಿಗೊಂಡು ನನ್ನ ಮಗನಿಗೆ ಪೋನ್ ಮಾಡಿರುತ್ತೇನೆ. ನಂತರ ನನ್ನ ಗಂಡನಿಗೆ ತಿಳಿಸಿದಾಗ ನನ್ನ ಗಂಡ ಅದನ್ನು ಚೆಕ್ ಮಾಡಿಸು ಎಂದು ತಿಳಿಸಿರುತ್ತಾರೆ. ನಂತರ ನಾನು ಮಣಿಪುರಂ ಗೋಲ್ಡ ಫೈನಾನ್ಸನಲ್ಲಿ ಚೆಕ್ ಮಾಡಿಸಿದಾಗ ಬಂಗಾರ ನಕಲಿ ಎಂದು ಹೇಳಿರುತ್ತಾರೆ. ನಂತರ ನಾನು ಕ್ಯಾತ್ಸಂದ್ರ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನಂತರ ನನ್ನ ಮಗ ದಾವಣಗೆರೆ ಡಿಸಿ ಆಫೀಸನಲ್ಲಿ ಆನ್ ಲೈನ್ ದೂರನ್ನು ಸಲ್ಲಿಸಿರುತ್ತಾನೆ. ನಂತರ ನಾವು ಹರಿಹರ ಪೋಲೀಸ್ ಠಾಣೆಗೆ ಮರುದಿವಸ ಬಂದಿರುತ್ತೇವೆ. ನಂತರ ಪೋಲೀಸರು ನಮಗೆ ರೂ.9 ಲಕ್ಷ ಹಣವನ್ನು ಕೊಡಿಸಿರುತ್ತಾರೆ. ಸಾಕ್ಷಿಯು ನಮಗೆ ಬಂಗಾರವನ್ನು ಕೊಟ್ಟು ಹಣ ಪಡೆದ ವ್ಯಕ್ತಿ ಆಕಾಶ ಅವನು ನ್ಯಾಯಾಲಯದಲ್ಲಿರುತ್ತಾನೆ ಇನ್ನೊಬ್ಬ ವ್ಯಕ್ತಿ ಯಾರು ಎಂದು ಗೊತ್ತಿರುವುದಿಲ್ಲ.

(ಸಾಕ್ಷಿಯು ಪೋಲೀಸರು ಬಂಗಾರವನ್ನು ನನ್ನಿಂದ ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ ಆದ್ದರಿಂದ ಸದರಿ ಬಂಗಾವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸೇಕೆಂದು

ಆದೇಶಿಸಿರುತ್ತೇನೆ. ಮುಂದುವರೆದ ಮುಖ್ಯವಿಚಾರಣೆಗೆ ಎಪಿಪಿರವರು ಸಮಯ ಕೋರಿದ್ದು

ಸಮಯಾವಕಾಶ ನೀಡ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.